# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

ತರಗತಿ: 9ನೇ ತರಗತಿ | 2022–23 | ವಿಷಯ: ಸಮಾಜ ವಿಜ್ಞಾನ

ಅಂಕಗಳು: 40 | ಸಮಯ: 1ಗಂಟೆ 30ನಿಮಿಷ

---

**I. ಈ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 4x1=4**

1. ಬಿಸ್ಮಾರ್ಕ್‌ನ 'ರಕ್ತ ಮತ್ತು ಕಬ್ಬಿಣ ತತ್ವ' ಎಂದರೆ
   A) ಒಪ್ಪಂದ ನೀತಿ B) ಯುದ್ಧ ನೀತಿ C) ವಸಾಹತು ನೀತಿ D) ಕೈಗಾರಿಕಾ ನೀತಿ
2. ಭಾರತ ಮೂಲದ ಬಹುರಾಷ್ಟ್ರೀಯ ಕಂಪನಿ
   A) ಸ್ಯಾಮಸಂಗ್ ಮೊಬೈಲ್ ಕಂಪನಿ B) ಹುಂಡೈ ವಾಹನ ಕಂಪನಿ C) ಅಮೇಜಾನ್ ಆನ್ ಲೈನ್ ಕಂಪನಿ D) ಟಾಟಾ ಮೋಟಾರ್ಸ್
3. ಫ್ರಾನ್ಸ್ ನಲ್ಲಿದ್ದ ಮೂರನೇ ವರ್ಗವಾದ ಸಾಮಾನ್ಯರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ
   A) ಅವರು ಗೌರವಸ್ಥಾನ ಹೊಂದಿದ್ದರು B) ಅವರು ರಾಜಕೀಯ ಹಕ್ಕುಗಳನ್ನು ಹೊಂದಿದ್ದರು.
   C) ಅವರು ತೆರಿಗೆ ವಿನಾಯಿತಿ ಹೊಂದಿದ್ದರು D) ಅವರು ಹೆಚ್ಚು ಆದಾಯ ಹೊಂದಿದ್ದರು.
4. ಇದು ಸಮಾನತೆಯ ಹಕ್ಕುಗಳ ವ್ಯಾಪ್ತಿಗೆ ಸಂಬಂಧಿಸಿದ್ದು
   A) ಅಸ್ಪೃಶ್ಯತೆಯನ್ನು ನಿಷೇಧಿಸುವುದು B) ಶಾಂತಿಯುತವಾಗಿ ಸಭೆ ನಡೆಸುವುದು
   C) ಉಚಿತ ಮತ್ತು ಕಡ್ಡಾಯ ಶಿಕ್ಷಣ D) ವ್ಯಕ್ತಿ ತನಗೆ ಇಷ್ಟ ಬಂದ ಧರ್ಮವನ್ನು ಪಾಲಿಸುವುದು

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 4x1=4**

5. ಪುರಾತತ್ವ ಆಧಾರಗಳು ಎಂದರೇನು?
6. ಸಾ.ಶ. 1453ರಲ್ಲಿ ಕಾನ್ ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು ಯಾರು?
7. ಸೂರ್ಯ ಮುಳುಗದ ನಾಡು ಎಂದು ಇಂಗ್ಲೆಂಡನ್ನು ಏಕೆ ಕರೆಯುತ್ತಾರೆ?
8. ಪುನರುಜ್ಜೀವನದ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 4x2=8**

9. ಯುರೋಪಿನಲ್ಲಿನ ಅಂಧಕಾರಯುಗ ಮತ್ತು ಆಧುನಿಕ ಯುಗದಲ್ಲಿ ಇದ್ದಿರಬಹುದಾದ ಲಕ್ಷಣಗಳನ್ನು ವಿಂಗಡಿಸಿ.
   * ದೇವರ ಹೆಸರಿನಲ್ಲಿ ಮೋಸ * ಪ್ರಶ್ನಿಸುವ ಮನೋಭಾವ * ವೈಜ್ಞಾನಿಕ ಮನೋಭಾವ * ಜನರನ್ನು ಗುಲಾಮರಂತೆ ಕಾಣುವುದು
10. ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ನಾಲ್ಕು ಉಪಕರಣಗಳನ್ನು ಹೆಸರಿಸಿ. <u>ಅಥವಾ</u>
    ವಸಾಹತುಶಾಹಿತ್ವದ ಬೆಳವಣಿಗೆಯ ನಾಲ್ಕು ಹಂತಗಳು ಯಾವುವು?
11. ಯುರೋಪಿನ ದೇಶಗಳಿಗೆ ಮಸಾಲೆ ಪದಾರ್ಥಗಳು ಹೆಚ್ಚು ಅವಶ್ಯಕವಾಗಿದ್ದವು. ಸಮರ್ಥಿಸಿ.
12. ದೇಶೀಯ ಹಾಗೂ ವಿದೇಶೀ ಸಾಹಿತ್ಯ ಆಧಾರಗಳಿಗೆ ಎರಡೆರಡು ಉದಾಹರಣೆ ಕೊಡಿ <u>ಅಥವಾ</u>
    ಫ್ರಾನ್ಸ್ ಕ್ರಾಂತಿಯು ಪ್ರಪಂಚದ ಜನರಿಗೆ ಯಾವುದರ ಮಹತ್ವ ತಿಳಿಸಿತು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 4x3=12**

13. ಊಳಿಗಮಾನ್ಯ ಪದ್ಧತಿ ನಾಶವಾಗಲು ಪ್ರಬಲ ಕಾರಣಗಳನ್ನು ಚರ್ಚಿಸಿರಿ. <u>ಅಥವಾ</u>
    ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳು ಸಮುದ್ರಯಾನದಲ್ಲಿ ಮುಂಚೂಣಿಯಲ್ಲಿದ್ದವು. ಸಮರ್ಥಿಸಿ.
14. ಕೈಗಾರಿಕಾ ಕ್ರಾಂತಿಗೆ ಕಾರಣಗಳಾವುವು? ಅಥವಾ ಕೈಗಾರಿಕಾ ಕ್ರಾಂತಿಯಿಂದಾ ಪರಿಣಾಮಗಳನ್ನು ವಿವರಿಸಿ.
15. ಅಮೇರಿಕಾ ಕ್ರಾಂತಿಯು ಹೇಗೆ ಫ್ರಾನ್ಸ್ ಕ್ರಾಂತಿಯ ಮೇಲೆ ಪ್ರಭಾವ ಬೀರಿತು?
16. ಭಾರತ ಸಂವಿಧಾನದಲ್ಲಿ ನೀಡಲಾಗಿರುವ ಯಾವುದಾದರೂ ಆರು ಮೂಲಭೂತ ಕರ್ತವ್ಯಗಳನ್ನು ಪಟ್ಟಿ ಮಾಡಿ. <u>ಅಥವಾ</u>
    ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ಮೂಲಭೂತ ಹಕ್ಕುಗಳನ್ನು ತಿಳಿಸಿ.

**V. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 2x4=8**

17. ಕೈಮಗ್ಗದಲ್ಲಿ ಬಟ್ಟೆ ತಯಾರಿಕೆಯ ಅನುಕೂಲಗಳು ಮತ್ತು ಅನಾನುಕೂಲಗಳನ್ನು ವಿವರಿಸಿ. <u>ಅಥವಾ</u>
    ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಬಟ್ಟೆ ತಯಾರಿಕೆಯ ಅನುಕೂಲಗಳು ಮತ್ತು ಅನಾನುಕೂಲಗಳನ್ನು ವಿವರಿಸಿ.
18. ನಮ್ಮ ಸಂವಿಧಾನದ ಲಕ್ಷಣಗಳನ್ನು ಬರೆಯಿರಿ.

**VI. 19. ಕಾಲಾನುಕ್ರಮದಲ್ಲಿ ಬರೆದು ಕಾಲರೇಖೆಯಲ್ಲಿ ಗುರುತಿಸಿ. 1x4=4**

i) ನೀವು ಹುಟ್ಟಿದ ವರ್ಷ ii) ಭಾರತದ ಸ್ವಾತಂತ್ರ್ಯಗೊಂಡ ವರ್ಷ
iii) ನೀವು ಶಾಲೆಗೆ ಸೇರಿದ ವರ್ಷ iv) ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದ ವರ್ಷ

*****************************************************